## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.93/2024

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಶಶಾಂಕ್ | CW: 1 | PW: 1 |
| ತಂದೆಯ ಹೆಸರು | : | ಹಾಲೇಶಪ್ಪ | | |
| ವಯಸ್ಸು | : | 23 | | |
| ವೃತ್ತಿ | : | ವ್ಯವಸಾಯ | | |
| ವಾಸಸ್ಥಳ | : | ಸಂತೇ ಕಡೂರು ಗ್ರಾಮ, ಶಿವಮೊಗ್ಗ ಜಿಲ್ಲೆ. | | |

ದಿನಾಂಕಃ 17.04.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ - ಮಾನ್ಯ ಸ.ಸ.ಅ.ರವರಿಂದಃ-

ಆರೋಪಿ ಗೊತ್ತು. ಚಾಸಾ 7, 8 ಗೊತ್ತು. ಚಾಸಾ 9 ಮತ್ತು 10 ಗೊತ್ತಿಲ್ಲ. ಮೃತ ಹಾಲೇಶ ನನ್ನ ತಂದೆ. ದಿಃ 07.09.2023 ರಂದು ಬೆಳಗ್ಗೆ 9.30 ಗಂಟೆಗೆ ನನ್ನ ತಂದೆ ಹಾಲೇಶಪ್ಪರವರು ಶಿಕಾರಿಪುರಕ್ಕೆ ಸಂಬಂಧಿಕರ ಮದುವೆ ಮುಗಿಸಿಕೊಂಡು ವಾಪಾಸ್ ಬರುವಾಗ ಶಿಕಾರಿಪುರ ಚಿನ್ನಿಕಟ್ಟೆ ಗ್ರಾಮದ ಹತ್ತಿರ ಅಪಘಾತವಾಗಿರುತ್ತದೆ. ಅಪಘಾತದ ವಿಚಾರವನ್ನು ನನಗೆ ಚಾಸಾ 8 ರವರು ದೂರವಾಣಿ ಕರೆ ಮೂಲಕ ತಿಳಿಸಿ, ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಸೇರಿಸಿದ್ದೇವೆ ಎಂದು ಹೇಳಿದರು. ಕೂಡಲೇ ನಾನು ಹರೀಶ್ ರವರ ಜೊತೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಹೋಗಿ ನೋಡಲಾಗಿ ನನ್ನ ತಂದೆಯ ತಲೆಗೆ, 2 ಕಾಲಿಗೆ , ಕೈಗೆ, ಬೆನ್ನಿಗೆ ಹೊಡೆತ ಬಿದ್ದು ರಕ್ತಸ್ರಾವವಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ವೈದ್ಯರ ಸಲಹೆಯ ಮೇರೆಗೆ ಶಿವಮೊಗ್ಗದ ಸರ್ಜಿ ಆಸ್ಪತ್ರೆಗೆ ಸೇರಿಸಿದೆವು. ಸದರಿ ದಿನ ಸಂಜೆ 7.30 ಗಂಟೆ ಸಮಯದಲ್ಲಿ ಚಿಕಿತ್ಸೆ ಫಲಕಾರಿಯಾಗದೇ ನನ್ನ ತಂದೆ ಮೃತಪಟ್ಟಿರುತ್ತಾರೆ. ಅದೇ ದಿನ ರಾತ್ರಿ 8 ಗಂಟೆ ಸಮಯಕ್ಕೆ ಘಟನಾ ಸ್ಥಳಕ್ಕೆ ಹೋಗಿ ನೋಡಲಾಗಿ ನನ್ನ ತಂದೆ ಚಾಲನೆ ಮಾಡುತ್ತಿದ್ದ

ಬೈಕ್ ಸ್ಥಳದಲ್ಲಿ ಜಖಂಗೊಂಡು ಬಿದ್ದಿತ್ತು. ನಂತರ ಬೈಕ್ ನ್ನು ಸವಳಂಗ ಠಾಣೆಯಲ್ಲಿ ಬೈಕ್ ಬಿಟ್ಟು ನ್ಯಾಮತಿ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸದರಿ ಅಪಘಾತ ಕಾರಿನ ಚಾಲಕನ ಅತೀವೇಗದ ಚಾಲನೆಯಿಂದ ಆಗಿರುತ್ತದೆ. ಅಪಘಾತಪಡಿಸಿದ ಕಾರಿನ ನಂಬರ್ ಕೆಎ 14 2712. ಈ ವಿಚಾರವಾಗಿ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ದೂರನ್ನು ಹಾಗೂ ದೂರಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ಠಾಣೆಯಲ್ಲಿ ನೋಡಿರುತ್ತೇನೆ. ಪುನಃ ನೋಡಿದರೆ ಗುರುತಿಸುತ್ತೇನೆ. ಆರೋಪಿಯು ನ್ಯಾಯಾಲಯದಲ್ಲಿ ಗೈರು ಹಾಜರಿದ್ದು, ಆರೋಪಿಯ ಗುರುತಿಸುವಿಕೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ಹೇಳಿರುತ್ತಾರೆ.

<u>ಪಾಟೀ ಸವಾಲುಃ- ಆರೋಪಿ ಪರ ಶ್ರೀ.ಜಿ ಎಸ್ ಕೆ ವಕೀಲರಿಂದಃ-</u>

ಎಲ್ಲಿಯ ತನಕ ಓದಿರುತ್ತೇನೆ ಎಂದರೆ ಎಸ್ ಎಸ್ ಎಲ್ ಸಿ. ನಿಪಿ 1 ದೂರನ್ನು ಯಾರು ಬರೆದಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಅಣ್ಣ ಚಾಸಾ 10 ರವರು ಎಂದು ನುಡಿಯುತ್ತಾರೆ. ಚಾಸಾ 10 ರವರು ಬರೆದ ನಿಪಿ 1 ದೂರಿಗೆ ಸಹಿ ಹಾಕು ಎಂದು ಹೇಳಿದ್ದಕ್ಕೆ ಸಹಿ ಹಾಕಿರುತ್ತೇನೆ ಎಂದರೆ ಸರಿ. ಚಾಸಾ 4 ಮತ್ತು 5 ರವರು ನನಗೆ ಏನಾಗಬೇಕು ಎಂದರೆ ನನ್ನ ತಾಯಿ ಮತ್ತು ತಂಗಿ ಎಂದು ನುಡಿಯುತ್ತಾರೆ. ಚಾಸಾ 10 ರವರು ಏನಾಗಬೇಕು ಎಂದರೆ ನನ್ನ ಅಣ್ಣ. ಚಾಸಾ 6, 7, 11 ರಿಂದ 13 ರವರು ಏನಾಗಬೇಕು ಎಂದರೆ ನಮ್ಮ ಗ್ರಾಮದವರು. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ನನ್ನ ತಂದೆಯವರಿಗೆ ವಾಹನ ಚಾಲನಾ ಪರವಾನಗೆ ಇದೆಯಾ ಎಂದರೆ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನನ್ನ ತಂದೆ ಬೆಳಗ್ಗೆ 9.30 ಕ್ಕೆ ಮದುವೆ ಮುಗಿಸಿ ವಾಪಾಸ್ ಬರುವಾಗ ಚೆನ್ನಿಕಟ್ಟೆ ಗ್ರಾಮದ ಹತ್ತಿರ ಅಪಘಾತವಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ 8 ರವರು ನನಗೆ ಅಪಘಾತದ ವಿಚಾರವಾಗಿ ದೂರವಾಣಿ ಮೂಲಕ ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ನನ್ನ ತಂದೆಯನ್ನು ನೋಡಲು ಹೋಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಶಿಕಾರಿಪುರದಿಂದ ಸವಳಂಗಕ್ಕೆ ಹೋಗುವ ರಸ್ತೆ ಅಗಲವಾಗಿದ್ದು ತಗ್ಗುಗಳಿಲ್ಲ ಎಂದರೆ ಸರಿ. ನನ್ನ ತಂದೆ ವೈಯಕ್ತಿಕ ಕಾರಣದಿಂದ ಅತೀವೇಗದಿಂದ ಬೈಕ್ ಚಾಲನೆ ಮಾಡಿ ಸ್ವತಃ ಬಿದ್ದು ಗಾಯಗಳು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಹಾಗಾಗಿ ನಮ್ಮ ತಂದೆಯ ಬೈಕ್ ಜಖಂಗೊಂಡಿದ್ದು

ಕಾರಿಗೆ ಯಾವುದೇ ಹಾನಿಯಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಸ್ವತಃ ಬಿದ್ದು ಗಾಯಗೊಂಡು ಮರಣ ಹೊಂದಿದ್ದರು ಸಹ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದೂರು ನೀಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ಕಾರನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ಪೊಲೀಸ್ ಠಾಣೆಯಲ್ಲಿ ನೋಡಿಲ್ಲದೇ ಇದ್ದರೂ ಸಹ ನೋಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.